ನಾಗರಾಜರನ್ನು ಹಿಡಿದುಕೊಂಡು ಇಕ್ಕಿದಮಕ್ಕೆ ಇಕ್ಕುತ್ತಿದ್ದರೆ ಕೊಯ್ಕು... ಕೊಯ್ಕು... ಎಂಬ ಶಬುದ ಬರುತ್ತಿತ್ತು. ಮತ್ತೊಬ್ಬ ಕ್ರಿಕೆಟ್ ಬ್ಯಾಟೊಂದನ್ನು ಹಿಡಿದು ಜೋರಾಗಿ ಕೂಗುತ್ತಾ ನಾಗರಾಜರ ತಲೆಗೆ ಸರಿಯಾಗಿ ಬಡಿದೇಬಿಟ್ಟ. ತೆಂಗಿನ ಕಾಯಿಯನ್ನು ನೀವಳಿಸಿ ನೆಲಕ್ಕೆ ಬಡಿದಾಗ ಬರುವ ಸವುಂಡು ಬಂತು.

* * *

ಕೀರಾಡಿಕೊಂಡು ಮೇಲೆದ್ದ ನಾಗರಾಜರ ಮೈ ಪೂರ ತಣ್ಣಗಾಗಿತ್ತು. ಎದ್ದವರೇ ಪಕ್ಕದಲ್ಲಿದ್ದ ಜಗ್ಗಿನಿಂದ ಆರುನೂರು ಎಂ.ಎಲ್. ನೀರನ್ನು ಗೊಳ್ಗಗೊಳ್ಗ ಎಂದು ಕುಡಿದು 'ಎಂಥಾ ಕನಸಪ್ಪಾ ಇದು, ಇದ್ರು ಮಕಾಸುಡ' ಎಂದು ಗೊಣಗುಟ್ಟದರು. ಮನೆ ದೇವರು ಗಂಟೇ ನಿಂಗನನ್ನು ಮನದಲ್ಲಿ ನೆನೆದು ಟೈಮು ನೋಡಿದಾಗ ಬೆಳಗಾಗಲು ಇನ್ನೂ ಸಮಯವಿತ್ತು. ಅಂಗೇ ಬಲಮಗ್ಗುಲಿಗೆ ಉಲ್ಡುಕೊಂಡರು.

ಬೆಳಗ್ಗೆ, ಕುದುರೆ ನಾಗರಾಜರು ಹೊತ್ತಿಗೆ ಮುಂಚೇನೆ ಯೂನಿವರ್ಸಿಟಿಗೆ ಬಂದು ರನ್ನಿಂಗ್ ಕೋರ್ಟ್‌ನಲ್ಲಿ ಮೂರು ರವಂಡು ಹೊಡೆದು, ಪಾರ್ಕಿನಲ್ಲಿ ಕೂತು ಕಣ್ತಂಪು ಮಾಡ್ಕಂಡರು. ಕ್ಯಾಂಪಸ್ ಹೋಟೆಲ್‌ನಲ್ಲಿ ಮೂರು ಗುಂಡಿಡ್ಲಿ, ಎಲ್ಡು ವಡೆ ತಿಂದು ಮುಗಿಸುವ ಹೊತ್ತಿಗೆ ಅವರ ಪ್ರಿಯ ಸಿಸ್ಯ ಅನಾಮತ್ತಿ ಶೇಖರಿಯೂ ಬಂದು ಅವರೊಟ್ಟಿಗೆ ಸೇರಿಕೊಂಡ. ಶೇಖರಿ ನಾಗರಾಜರ ಅಂಡರ್ ಅಲ್ಲಿ ಅದೆಂತದೋ ವಿಷಯ ಕುರಿತು ಪಿಎಚ್.ಡಿ ಮಾಡುತ್ತಿದ್ದ. ನಾನೇನು ಮಾಡ್ತಿದಿನೀ, ಏನು ಮಾಡಬಹುದು ಎಂದು ಸಿಸ್ಯನಿಗಾಗಲೀ, ನಾನು ಈ ಅ-ಸಾಮಾನ್ಯ, ಅ-ಕ್ಷೀಣಬಲ ಸಿಸ್ಯನಿಗೆ ಏನು ಕಲಿಸಬೇಕು, ಏನು ಬರೆಸಬೇಕು? ಎಂಬುದನ್ನು ಗುರುವಾಗಲೀ ಒಂದರಗಳಿಗೆಯೂ ಯೋಚಿಸಿರಲಿಲ್ಲ. 'ಆದಂಗೆ ಆಗಲಿ ಮಾದಪ್ಪನ ಜಾತ್ರೆ' ಎಂಬ ಗಾದೆ ಮಾತನ್ನು ಈ ಗುರು-ಶಿಷ್ಯರು ಶಿರಸಾವಹಿಸಿ ಪಾಲಿಸಿ ಕೊಂಡು ಬರುತ್ತಿದ್ದರು.

ಇವರಿಬ್ಬರೂ ಹೀಗೆ ಹೋಟ್ಲಿನಲ್ಲಿ ಸೇರಿದ್ದ ಟೈಮಿಗೆ ಕ್ಯಾಂಪಸ್ ಹೋಟ್ಲಿನ ಕಾಯಂ ಗಿರಾಕಿಯೂ ಕಂಜೂಸ್ ಅಂದ್ರೆ ಕಂಜೂಸು ಪಾರ್ಟಿಯೆಂದು ವಿಶ್ವವಿದ್ಯಾನಿಲಯದ ತುಂಬಾ ಖ್ಯಾತಿ ಪಡೆದಿದ್ದ ಡಾ. ಸಂಜೀವಯ್ಯರು ಸೀದಾ ನಾಗರಾಜರು ಮತ್ತು ಅವನ ಸಿಸ್ಯ ಶೇಖರಿಯನ್ನು ನೋಡಿ 'ಎಲ್ಲಿಗೆ ಬಂತು ಸಂಶೋಧನೆ?' ಅಂದ್ರು. ಸಂಶೋಧನೆ ಎಂಬ ಶಬುದ ಕಿವಿಗೆ ಬಿದ್ದದ್ದೇ ತಡ ನಾಗರಾಜರಿಗೆ ಗಡರ್ರ್... ತೇಗು ಬಂದು ತಿಂದಿದ್ದೆಲ್ಲಾ ಹೊಟ್ಟೆ ಒಳಗೆ ಸೆಟ್ ಆಗಿ ಕುತ್ಕಂಡಂಗಾಯ್ತು. ಸಂಜೀವಯ್ಯನ ಪ್ರಶ್ನೆಗೆ ಗುರು-ಶಿಷ್ಯರು ಮುಖಾಮುಖ ನೋಡ್ಕಂತಿರೋವಾಗಲೇ ಸಿಸ್ಯೋತ್ತಮ ಶೇಖರಿಯು 'ಇನ್ನು ಕೋರ್ಸ್‌ವರ್ಕ್ ನಡೀತಿದೆ ಗುರುಗಳೇ' ಅಂದ.



ಶೇಖರಿ ಸಂಶೋಧನೆಗೆ ಸೇರಿ ಕೆಲವೇ ವರ್ಷಗಳಾಗಿದ್ದರೂ ನಾಗರಾಜರ ಕಣ್ಸನ್ನೆ-ಕೈಸನ್ನೆ, ಬೈದಂಗೆ ಹೊಗಳೋದು, ಹೊಗಳಂಗೆ ಬಯ್ಯೋದು, ಇವರಿಗಂದಂಗೆ ಇನ್ನೊಬ್ಬರಿಗೆ ಅನ್ನೋದು, ಇನ್ನೊಬ್ಬರಿಗಂದಂಗೆ ಮತ್ತೊಬ್ಬರಿಗೆ ಅನ್ನೋದು ಇಂಥಾ ಹತ್ತಾರು ಪಟ್ಟುಗಳನೆಲ್ಲಾ ರುಬ್ಬಿ ಉಪ್ಪಾಕ್ಕಂಡು ಕುಡ್ಕಂಡಿದ್ದ. ಯಾವಾಗ ಶ್ರೀಗುರುವು ಸಿಸ್ಯನಿಗೆ ಲಕ್ವ ಹೊಡದಂಗೆ ಸಣ್ಣಗೆ ಎಡಕ್ಕೆ ತುಟಿ ಎಳೆದು ಒಮ್ಮೆ ಕಣ್ಣು ಮಿಟುಕಿಸಿದನೋ ಆಗಲೇ ಆ ಸೂಚನೆಯನ್ನು ಅರ್ಥ ಮಾಡಿಕೊಂಡ ಶೇಖರಿ ಎದ್ದೋದವನೇ ಮೂರು ಗುಂಡಿಡ್ಲಿ ಎಲ್ಡು ವಡೆಯ ದುಡ್ಡು ಕೊಟ್ಟು ಬಂದು 'ಒಲ್ಡನಾ ಗುರುಗಳೇ' ಅಂದಿದ್ದ.

* * *

ಅಸಿಸ್ಟೆಂಟ್ ಪ್ರೊಫೆಸರ್ ಆಗಿ ನೇಮಕವಾಗಿದ್ದ ನಾಗರಾಜರು ಯೂನಿರ್ವಸಿಟಿಗೆ ಸೇರಿ ಆಗತಾನೆ ನಾಲ್ಕು ವರ್ಷಗಳಾಗಿದ್ದವು. ವಿಶ್ವವಿದ್ಯಾಲಯದ ಆಂತರಿಕ ನಿಯಮಗಳ ಪ್ರಕಾರ ಪಿಎಚ್.ಡಿ ಗೈಡ್ ಆಗಲು ಅರ್ಜಿ ಸಲ್ಲಿಸುವ ಪ್ರಾಧ್ಯಾಪಕರುಗಳು ಪಿಎಚ್.ಡಿ ಮುಗಿಸಿ ಕನಿಷ್ಠ ಐದು ವರ್ಷಗಳು ಕಡ್ಡಾಯವಾಗಿ ಸೇವೆ ಸಲ್ಲಿಸಿರಬೇಕೆಂಬ ನಿಯಮ ನಾಗರಾಜರಿಗೆ ಬಹಳ ತೊಡಕಾಗಿ ಕಾಡಿತ್ತು. ಈ ದೆಸೆಯಿಂದ ಲೋಕದ ಜನರಿಗೆಲ್ಲಾ ಸಿಕ್ಕಿ ಸಿಕ್ಕಿತ್ತವೆಲ್ಲಾ ಅಡ್ಡಾಕ್ಯಂಡು ಗೈಡ್ ಮಾಡುತ್ತಾ ಅಕ್ಷರಶಃ ಲೋಕಗುರುವಾಗಿದ್ದ ನಾಗರಾಜರಿಗೆ ಸಂಶೋಧನಾ